# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 876 |
| ಉತ್ತರಿಸಬೇಕಾದ ದಿನಾಂಕ | 13-12-2023 |
| ಸದಸ್ಯರ ಹೆಸರು | ಶ್ರೀ ಮರಿ ತಿಬ್ಬೇಗೌಡ |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿನ ಆರ್‌ಆರ್‌ಟಿ ಶಾಖೆಯಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಒಟ್ಟು 67342 ಆರ್‌ಆರ್‌ಟಿ ಅರ್ಜಿಗಳು ಬಾಕಿಯಿದ್ದು ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಆ | ಆರ್‌ಆರ್‌ಟಿ ಶಾಖೆಯ ಅರ್ಜಿಗಳ ವಿಲೇವಾರಿಯ ವಿಳಂಬದಿಂದಾಗಿ ರೈತರು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆರ್.ಆರ್.ಟಿ. ಶಾಖೆಯ ಅರ್ಜಿಗಳ ಶೀಘ್ರ ವಿಲೇವಾರಿ ನಿಟ್ಟಿನಲ್ಲಿ ವಿಭಾಗವಾರು ಹಾಗೂ ಜಿಲ್ಲಾವಾರು, ಪ್ರಗತಿ ಪರಿಶೀಲನಾ ಸಭೆಗಳನ್ನು, ಕಂದಾಯ ಆಯುಕ್ತರು, ಪ್ರಾದೇಶಿಕ ಆಯುಕ್ತರುಗಳು, ಜಿಲ್ಲಾಧಿಕಾರಿಗಳೊಂದಿಗೆ ನಿರಂತರವಾಗಿ ನಡೆಸಲಾಗುತ್ತಿದೆ. |
| ಇ | ಆರ್‌ಆರ್‌ಟಿ ಅರ್ಜಿಗಳನ್ನು ವಿಲೇವಾರಿ ಮಾಡಲು ಸಮಯ ನಿಗದಿಗೊಳಿಸಲಾಗಿದೆಯೇ; | |
| ಈ | ತ್ವರಿತವಾಗಿ ಅರ್ಜಿಗಳನ್ನು ಇತ್ಯರ್ಥಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | |
| ಉ | 11-ಇ ಸ್ಕೆಚ್ ಮಾಡುವಲ್ಲಿ ವಿಳಂಬ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಊ | 11-ಇ ಸ್ಕೆಚ್‌ಗಾಗಿ ಮಾಡುವಲ್ಲಿ ಸಮಯ ನಿಗದಿಪಡಿಸಲಾಗಿದೆಯೇ; ಸದರಿ ವಿಳಂಬ ತಪ್ಪಿಸಲು ಯಾವ ಕ್ರಮವಹಿಸಲಾಗಿದೆ? | ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ.2. ಎಸ್.ಎಸ್. ಎಂ-2020 ದಿನಾಂಕ:23-11-2020ರನ್ವಯ 11ಇ ನಕ್ಷೆ ಕೋರಿ ಸಲ್ಲಿಕೆಯಾಗುವ ಅರ್ಜಿಯಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ನಿಯಮಾನುಸಾರ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣಗಳನ್ನು ಹಂಚಿಕೆಯಾದ ದಿನಾಂಕದಿಂದ 45 ದಿನಗಳಲ್ಲಿ ಇತ್ಯರ್ಥ ಪಡಿಸಲು ಕಾಲಮಿತಿ ನಿಗಧಿಪಡಿಸಲಾಗಿದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ<br><br>**<u>11ಇ ಅರ್ಜಿಗಳ ವಿಲೇವಾರಿಗೆ ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳು:</u>**<br><br>ಪ್ರಾ.ಶುಲ್ಕು / ಸ್ವೀಕೃತಿ / ಒಟ್ಟು / ವಿಲೇ / ಬಾಕಿ / ಕಂದಾಯ ಶಾಖೆಯಲ್ಲಿ / ಭೂ ಮಾಪನ ಶಾಖೆಯಲ್ಲಿ ಬಾಕಿ<br>**483820 / 846369 / 1330189 / 936669 / 393520 / 136388 / 257132**<br><br>ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ ಪ್ರಾರಂಭಿಕ ಶಿಲ್ಕು 483820 ಇದ್ದು ಈವರೆಗೆ ಒಟ್ಟು 846369 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಅದರಂತೆ ಒಟ್ಟು 1330189 ಅರ್ಜಿಗಳು ಬಾಕಿ ಇದ್ದು ಈ ಪೈಕಿ 936669 ಅರ್ಜಿಗಳನ್ನು ವಿಲೇ ವಾರಿ ಮಾಡಲಾಗಿದ್ದು, ಇನ್ನೂ 393520 ಅರ್ಜಿಗಳು ಬಾಕಿಯಿರುತ್ತವೆ. |

**11ಇ ಅರ್ಜಿಗಳ ವಿಲೇವಾರಿಗೆ ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳು (table):**

| ಪ್ರಾ.ಶುಲ್ಕು | ಸ್ವೀಕೃತಿ | ಒಟ್ಟು | ವಿಲೇ | ಬಾಕಿ | ಕಂದಾಯ ಶಾಖೆಯಲ್ಲಿ | ಭೂ ಮಾಪನ ಶಾಖೆಯಲ್ಲಿ ಬಾಕಿ |
|---|---|---|---|---|---|---|
| **483820** | **846369** | **1330189** | **936669** | **393520** | **136388** | **257132** |

ಬಾಕಿ ಅರ್ಜಿಗಳ ಪೈಕಿ 136388 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ಕಂದಾಯ ಶಾಖೆಯಲ್ಲಿ ಮತ್ತು 257132 ಅರ್ಜಿಗಳು ಭೂ ಮಾಪನ ಶಾಖೆಯಲ್ಲಿ ಬಾಕಿಯಿರುತ್ತವೆ.

1) ರಾಜ್ಯದಲ್ಲಿ ಸರಾಸರಿ 1.20 ಲಕ್ಷ ಅರ್ಜಿಗಳು ಸ್ವೀಕೃತವಾಗುತ್ತಿದ್ದು ಹಿಂದಿನ ಬಾಕಿರುವ ಅರ್ಜಿಗಳು ಸೇರಿದಲ್ಲಿ ಪ್ರತಿ ಮಾಹೆ ಸರಾಸರಿ 1.5 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಲಾಗುತ್ತಿದೆ.

ಸದರಿ ಅರ್ಜಿಗಳನ್ನುಶೀಘ್ರ ವಿಲೇ ಮಾಡುವ ಕುರಿತು 2022ನೇ ಸಾಲಿನಲ್ಲಿ 1519 ಜನಪರವಾನಗಿ ಭೂ ಮಾಪಕರನ್ನು ಆಯ್ಕೆ ಮಾಡಿದ್ದು ಪ್ರಸ್ತುತ 2023ನೇ ಸಾಲಿನ 2000 ಪರವಾನಗಿ ಭೂ ಮಾಪಕರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿ ಪ್ರವೇಶ ಪರೀಕ್ಷೆ ನಡೆಸಿ 1405 ಜನ ಅರ್ಹ ಆಭ್ಯರ್ಥಿಗಳು ಆಯ್ಕೆ ಮಾಡಿ ತರಬೇತಿ ನೀಡಲಾಗುತ್ತಿದೆ

ತರಬೇತಿ ನಂತರ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ನಿಯೋಜಿಸಲಾಗುವುದು, ಅದರಂತೆ ಮಾಹೆ ಜನವರಿ 2024 ಕ್ಕೆ ಈ ಎಲ್ಲಾ ಭೂಮಾಪಕರು ಅಳತೆಗಾಗಿ ಲಭ್ಯವಾಗುತ್ತಾರೆ.

2) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.

3) ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ & ಅಗತ್ಯ ಸೂಚನೆ ನೀಡಲಾಗುತ್ತಿದೆ.

4) ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್.ಲೈನ್. ನಲ್ಲಿ ಸ್ವೀಕರಿಸಲಾಗುತ್ತಿದ್ದು. ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿಸಾಲಿನಂತೆ) ಅಳವಡಿಸಲಾಗಿದೆ, ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ವಿತರಿಸಲಾಗುತ್ತಿದೆ. ಅಳತೆಯಾದ ನಂತರ ಭೂಮಾಪಕರು ಸರದಿ ಸಾಲಿನಂತೆ ಅಪ್‌ಲೋಡ್ ಮಾಡಲು ಹಾಗೂ ಕಡತಗಳ ಪರಿಶೀಲನೆ & ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್.ಲೈನ್.ನಲ್ಲೇ ಸರದಿ ಸಾಲಿನಂತೆ ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೆವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಕಂಇ 257ಎಂಆರ್‌ಆರ್ 2023

**(ಕೃಷ್ಣಬೈರೇಗೌಡ)**
ಕಂದಾಯ ಸಚಿವರು

**ಅನುಬಂಧ-01**

( ಪ್ರಾದೇಶಿಕ ಆಯುಕ್ತರುಗಳು ಸಲ್ಲಿಸಿರುವ ಮಾಹಿತಿಯನ್ವಯ)

| ಕ್ರ.ಸಂ | ಜಿಲ್ಲೆ | ಬಾಕಿ ಇರುವ ಆರ್.ಆರ್.ಟಿ ಅರ್ಜಿ ಸಂಖ್ಯೆ |
|---|---|---|
| 01 | ಬೆಳಗಾವಿ | 1680 |
| 02 | ವಿಜಯಪುರ | 691 |
| 03 | ಬಾಗಲಕೋಟ | 89 |
| 04 | ಧಾರವಾಡ | 108 |
| 05 | ಗದಗ | 439 |
| 06 | ಹಾವೇರಿ | 988 |
| 07 | ಉತ್ತರ ಕನ್ನಡ | 257 |
| 08 | ಬೆಂಗಳೂರು ನಗರ | 2577 |
| 09 | ಬೆಂಗಳೂರು ಗ್ರಾಮಾಂತರ | 3710 |
| 10 | ರಾಮನಗರ | 2714 |
| 11 | ಕೋಲಾರ | 1112 |
| 12 | ಚಿಕ್ಕಬಳ್ಳಾಪುರ | 2469 |
| 13 | ತುಮಕೂರು | 7728 |
| 14 | ಚಿತ್ರದುರ್ಗ | 1785 |
| 15 | ದಾವಣಗೆರೆ | 1850 |
| 16 | ಶಿವಮೊಗ್ಗ | 5666 |
| 17 | ಚಾಮರಾಜನಗರ | 1201 |
| 18 | ಚಿಕ್ಕಮಗಳೂರು | 1004 |
| 19 | ದಕ್ಷಿಣ ಕನ್ನಡ | 5944 |
| 20 | ಹಾಸನ | 1715 |
| 21 | ಕೊಡಗು | 708 |
| 22 | ಮಂಡ್ಯ | 6592 |
| 23 | ಮೈಸೂರು | 2102 |
| 24 | ಉಡುಪಿ | 7407 |
| 25 | ಕಲಬುರುಗಿ | 470 |
| 26 | ಬೀದರ್ | 2555 |
| 27 | ಯಾದಗಿರಿ | 458 |
| 28 | ರಾಯಚೂರು | 1355 |
| 29 | ಕೊಪ್ಪಳ | 392 |
| 30 | ಬಳ್ಳಾರಿ | 721 |
| 31 | ವಿಜಯನಗರ | 855 |
| ಒಟ್ಟು | | **67342** |

Signed by Sunil Kumar P
Date: 12-12-2023 13:23:33
Reason: Approved

ಆಯುಕ್ತರು,
ಕಂದಾಯ ಆಯುಕ್ತಾಲಯ
ಬೆಂಗಳೂರು.